
ಪದಬಂಧ




ಎಡದಿಂದ ಬಲಕ್ಕೆ :

1. ಆರಂಭದಿಂದಲೂ ಆತನದು ಬರೀ ಗದ್ದಲ, ಕೂಗಾಟ (3)
3. ಬೇರೇನೂ ಕೆಲಸವಿಲ್ಲದೆ ಸದಾ ನಿರಾಸಕ್ತಿ (3)
4. ಚುಟುಕಾಗಿ ನುಡಿದರೂ ಚುರುಕಾದ ಮಾತು (3)
6. ಹೊಸದೇನನ್ನೇ ಕಲಿಯಬೇಕೆಂದರೂ ತಾಳ್ಮೆ ಬೇಕೇ ಬೇಕು (3)
7. ಆನಂದನ ಕೆಲಸವೇ ಅಲ್ಲಿ, ಪ್ರತಿನಿತ್ಯ (4)
9. ಮಾತಿಗೆಟುಕದಷ್ಟು ವಂಚನೆಯ ಮಂತ್ರತಂತ್ರ ಕಲಿತವಳು ಉಂಟೇ? (4)
11. ಯಜ್ಞಯಜನಗಳಿಗೆಲ್ಲ ಒಡೆಯನಾದದ್ದು ಹೇಗೆ ? (4)
13. ಬೇರಿನಾಳದ ನಿಧಿಗೆ ಮನುಷ್ಯರನ್ನೇ ಕೊಂದು ಅರ್ಪಿಸುವುದೇ ? (4)
15. ಆತನ ತಮ್ಮನಿಗಾದಾಅನಂದಕ್ಕೆ ಪಾರವೇ ಇಲ್ಲ (3)
17. ಕೊರಳ ಪಟ್ಟಿ ಹಿಡಿಯ ಬಂದರೆ ರೇಗು, ಸಿಟ್ಟಾಗು (3)
18. ಕುಡುಕ ಜನರನ್ನು ಕಂಡರೇ ಭಾರೀ ಹೆದರಿಕೆ (3)
19. ಹೂ ಕಟ್ಟುವ ಕೆಲಸ ಕುರಿತು ವ್ಯಂಗ್ಯದ ಮಾತು ಏಕೆ ? (3)

ಮೇಲಿಂದ ಕೆಳಕ್ಕೆ :

1. ಅಸುರರಿಗೂ ಇದ್ದಾನೆ, ಒಬ್ಬ ರಾಜ (3)
2. ಚರಚರನೆ ಕತ್ತರಿಸಿ ಜೋಡಿಸಿದ್ದು ಅದೆಂಥ ನಿರ್ಮಿತಿ ? (3)
3. ಬಾಗುವುದಿಲ್ಲವೆಂಬ ಪ್ರತಿಜ್ಞೆ ಕೇಳಿ ಭಾರೀ ಪರಿತಾಪ (3)
5. ಕಾರನ್ನುಇಟ್ಟವರಿಗೆಲ್ಲ ಸಿಕ್ಕೀತೇ ಅರಸನ ಟೊಪ್ಪಿಗೆ ? (3)
7. ತೀವ್ರ ಅಭ್ಯಾಸದ ದಯೆಯಿಂದ ಇಂಥ ಏಳ್ಗೆ, ಮುನ್ನಡೆ (4)
8. ಭಾನಾಮತಿ ಎಂಬ ಅಜ್ಞಾನದ ಹೊಸ ಭಯ (4)
9. ದಮನಕ್ಕೆ ಬಗ್ಗದೆ ನಿಂತವನಿಗೆ ಮರ್ಯಾದೆಯೇ ಐಶ್ವರ್ಯ (4)
10. ಜೊತೆ ಜೊತೆಯಲ್ಲೇ ಬೆಳೆದಿದ್ದ ದ್ವೇಷ ತೊರೆಯಲು ಎಳ್ಳು ಹಾಕಿ ಕೈ ಮುಗಿದ (4)
12. ತಾಪತ್ರಯಕ್ಕೆ ಸಿಲುಕಿದ್ದನ್ನು ಘೋಷಿಸಲು ಎಂಥ ಬಾವುಟ ? (3)
14. ಕಾರಂಜಿಯಲ್ಲೇ ಬಟ್ಟೆ ಒಗೆಯುತ್ತಿದ್ದಾನೆ, ಅಗಸ (3)
15. ಆಕಳನ್ನು ಮುಟ್ಟಲು ಏಕೋ ಹಿಂಜರಿತ (3)
16. ಕತ್ತಲಿನ ವೇಳೆ ಬರುವವರೆಗೂ ..... (3)

**6-7-2017ರ ಉತ್ತರಗಳು**

ಎಡದಿಂದ ಬಲಕ್ಕೆ :
1. ಅಭಿನಯ ; 3. ಶರಧಿ ; 4. ವರ್ತನೆ ; 6. ಕಪ್ಪುಧನ ; 7. ಪರಿಕರ ; 9. ಹಾಳು ನೆಲ ; 11. ಮಹಾವೀರ ; 13. ರವಿವಾರ ; 15. ಅಂಬರೀಶ ; 17. ಯಯಾತಿ ; 18. ವದನ ; 19. ಮತಿಹೀನ

ಮೇಲಿಂದ ಕೆಳಕ್ಕೆ :
1. ಅಧಿಕ ; 2. ಯವನ : 3. ಶತಕ ; 5. ನೆರಳು ; 7. ಪರಾಕ್ರಮ ; 8. ರತ್ನಾಕರ ; 9. ಹಾನಿಕರ ; 10. ಲಕ್ಷಾಂತರ ; 12. ವೀಳೆಯ ; 14. ವಿಪಿನ ; 15. ಅಂತಿಮ ; 16. ಶಮನ


ಪ್ರಶ್ನಾಂಕಣ

# ಮೋಲಾ ಮೀನು; ವಿಸ್ಮಯ ಏನು?

ಮೋಲಾ; ಅದೊಂದು ಅತಿ ವಿಚಿತ್ರ, ಅತಿ ವಿಶಿಷ್ಟ ಮೀನು. ಲ್ಯಾಟಿನ್ ಭಾಷೆಯಲ್ಲಿ ಮೋಲಾ ಎಂದರೆ 'ಬೀಸುವ ಕಲ್ಲು' ಎಂದರ್ಥ. ಸರಿಸುಮಾರು ಗುಂಡಾದ, ದಪ್ಪನಾದ ಆಕಾರ ; ಬೆಳ್ಳಿಯಂತೆ ಹೊಳೆವ ವರ್ಣದ, ಒರಟೊರಟಾದ ಗಟ್ಟಿ ಚರ್ಮದ ಶರೀರ (ಚಿತ್ರ 2 ಮತ್ತು ಚಿತ್ರ 4 ನೋಡಿ ) ಈ ಗುಣಗಳಿಂದಾಗಿ ಈ ಮೀನಿಗೆ ಮೋಲಾ ಎಂಬ ರೂಪಾನ್ವಯ ಹೆಸರು. ಮೋಲಾಗಳಿಗೆ ಸೂರ್ಯ ಮೀನು ಎಂಬ ಅಭಿಧಾನವೂ ಇದೆ.

ಮೋಲಾದ ಶಾರೀರಿಕ ವೈಚಿತ್ರ್ಯವಿಸ್ಮಯಗಳು ಹಲವಾರು : ಈ ಮೀನಿನದು ಬಂದೂಕದ ಗುಂಡಿನಂತಹ ಆಕಾರ ; ಬಾಲ ಕತ್ತರಿಸಲ್ಪಟ್ಟ ಬೃಹತ್ ಶಾರ್ಕ್ ನಂಥ ರೂಪ ( ಚಿತ್ರ 3 ) ; ಕಡಲಲ್ಲಿ ನೇರ ನೋಡಿದರಂತೂ "ತೇಲುತ್ತಿರುವ ಒಂದು ಬೃಹತ್ ತಲೆ" ಯಂತೆ ಕಾಣುವ ಸ್ವರೂಪ ( ಚಿತ್ರ 2 ) ! ಎಲುಬಿನ ಮೀನುಗಳಲ್ಲೆಲ್ಲ ಇದರದೇ ಅತ್ಯಂತ ಹೆಚ್ಚು ತೂಕ. ವಯಸ್ಕ ಗಂಡು ಮೋಲಾಗಳು 14 ಅಡಿ ಎತ್ತರ, 10 ಅಡಿ ಅಡ್ಡಗಲ ಮುಟ್ಟುತ್ತವೆ ; ಎರಡು ಟನ್ ಗೂ ಅಧಿಕ ತೂಗುತ್ತವೆ ! ದೇಹ ಗಾತ್ರಕ್ಕೆ ಹೋಲಿಸಿದರೆ ಚಿಕ್ಕದೆನಿಸುವ ಬಾಯಿಯೊಳಗಿನ ಹಲ್ಲುಗಳೆಲ್ಲ ಒಂದರೊಡನೊಂದು ಬೆಸೆಗೊಂಡು ಕೊಕ್ಕಿನಂತೆ ರಚನೆಗೊಂಡಿವೆ. ಹಾಗಾಗಿ ಬಾಯನ್ನು ಸಂಪೂರ್ಣವಾಗಿ ಮುಚ್ಚಿಕೊಳ್ಳುವುದು ಮೋಲಾಗಳಿಗೆ ಸಾಧ್ಯವೇ ಇಲ್ಲ ( ಚಿತ್ರ1) !

ಧರೆಯ ಉಷ್ಣ ವಲಯ ಮತ್ತು ಸಮ ಶೀತೋಷ್ಣ ವಲಯಗಳ ಕಡಲಿನಾವಾರಗಳಲ್ಲಷ್ಟೇ ನೆಲೆಸಿರುವ ಮೋಲಾಗಳಲ್ಲಿ ಎರಡೇ ಎರಡು ಪ್ರಭೇದಗಳಿವೆ. ಸಾಮಾನ್ಯವಾಗಿ 150 ರಿಂದ 650 ಅಡಿ ಆಳದಲ್ಲೇ ಇವುಗಳ ಬೇಟೆಚಲನೆಆಹಾರಾನ್ವೇಷಣೆಈಜಾಟಗಳಾದರೂ ಪ್ರತಿ ದಿನದ ಹಗಲಿನ ಅರ್ಧದಷ್ಟು ಸಮಯವನ್ನು ಮೋಲಾಗಳು ಕಡಲ ಮೇಲ್ಮೈಯಲ್ಲೇ ಕಳೆಯುತ್ತವೆ; ಕಡಲ ನೀರಲ್ಲಿ ಮೈ ಚೆಲ್ಲಿ ತೇಲುತ್ತ ಬಿಸಿಲಲ್ಲಿ ಮೈ ಕಾಯಿಸಿಕೊಳ್ಳುತ್ತವೆ ( ಚಿತ್ರ 3 ).




ಮೋಲಾಗಳ ಪ್ರಧಾನ ಆಹಾರ ಜೆಲ್ಲಿ ಮೀನು , ಇತರ ಚಿಕ್ಕ ಮತ್ಸ್ಯಗಳು ಮತ್ತು ಕಣ ಗಾತ್ರದ ಸಾಗರ ಪ್ರಾಣಿಗಳಾದ ಝೂ ಪ್ಲಾಂಕ್ಟನ್ ಗಳು. ತುಟಿಗಳನ್ನೂ ಆವರಿಸಿದಂತೆ ( ಚಿತ್ರ 1 ), ಈ ಮೀನುಗಳ ಒರಟು ಚರ್ಮದ ಇಡೀ ಶರೀರದ ಮೇಲೆ ಹಲವು ಹತ್ತು ವಿಧಗಳ ಪರಾವಲಂಬಿಗಳು ಕಿಕ್ಕಿರಿದು, ಕಚ್ಚಿ ಹಿಡಿದು ಹರಡಿರುತ್ತವೆ. ಈ ಪರಾವಲಂಬಿಗಳನ್ನು ಆಹಾರವಾಗಿ ತಿಂದು ಹಾಕುವ, ಮಿತ್ರ ವರ್ಗದ ಹಲವಾರು ವಿಧ ಚಿಕ್ಕ ಮೀನುಗಳು ಮತ್ತು ಕಡಲ ಹಕ್ಕಿಗಳು ಮೋಲಾಗಳು ಕಡಲ ಮೇಲ್ಮೈಗೆ ಬಂದಾಗಲೆಲ್ಲ ಅವುಗಳ ಶರೀರವನ್ನು ಮುತ್ತಿ ಸ್ವಚ್ಛಗೊಳಿಸುವ ಕಾರ್ಯ ನಡೆಸುತ್ತವೆ. ಅದೊಂದು ವಿಧದ, ಬಹು ಸೋಜಿಗದ ಪರಸ್ಪರಾವಲಂಬನೆ.

ಅತ್ಯಂತ ವಿಶೇಷ ಏನೆಂದರೆ, ಹೆಣ್ಣು ಮೋಲಾಗಳು ಉತ್ಪಾದಿಸುವ ತತ್ತಿಗಳ ಸಂಖ್ಯೆಯದು ಇಡೀ ಕಶೇರುಕ ಸಾಮ್ರಾಜ್ಯದಲ್ಲೇ ಗರಿಷ್ಠ ಪ್ರಮಾಣದ ವಿಶ್ವ ದಾಖಲೆ. ಪ್ರತಿ ಬಾರಿಯೂ ಪ್ರತಿ ಹೆಣ್ಣೂ ಉತ್ಪಾದಿಸುವ ಮೊಟ್ಟೆಗಳ ಸಂಖ್ಯೆ ಸುಮಾರು ಮುವ್ವತ್ತು ಕೋಟಿ ! ಆದರೆ ಇವುಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಫಲವಂತಗೊಂಡು ಯಶಸ್ವಿಯಾಗಿ ವಯಸ್ಕ ಹಂತ ತಲುಪುತ್ತವೆ.

ಮನುಷ್ಯರಿಗೆ ಅತ್ಯಂತ ನಿರಪಾಯಕಾರಿಯಾದ ಈ ಪರಮ ವಿಸ್ಮಯದ ಮತ್ಸ್ಯಗಳ ಸರಾಸರಿ ಆಯುಷ್ಯ ಹತ್ತು ವರ್ಷ ಮಾತ್ರ !

■ ಎನ್. ವಾಸುದೇವ್